# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಮಂಗಳೂರು ವಿಭಾಗ:ಮಂಗಳೂರು

ಸಂ:ಕರಾಸ:ಮಂವಿ:ಸಂ:ಶಾ: 4480 :2019-20 ದಿ:17.02.2020

## :ಸಂಧಾನ ಪ್ರಕಟಣೆ ಸಂ:10/2019-20:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಗಳೂರು ವಿಭಾಗದ ವ್ಯಾಪ್ತಿಯ ಮಂಗಳೂರು ಬಸ್ಸು ನಿಲ್ದಾಣದಲ್ಲಿ ಖಾಲಿಯಿರುವ ಯಾತ್ರಿ ನಿವಾಸ/ಕಛೇರಿ ಸ್ಥಳ ಬಳಕೆ/ವಾಣಿಜ್ಯ ಬಳಕೆ/ಇತರೆ ಮಳಿಗೆ ಸಂಖ್ಯೆ:15ಕ್ಕೆ ಹೊಸದಾಗಿ ಪರವಾನಿಗೆದಾರರ ಆಯ್ಕೆಗಾಗಿ ಖಾಯಂ/ಕಟ್ಟಿದ ಮಳಿಗೆಗಳಿಗೆ ಹತ್ತು(10) ವರ್ಷದ ಅವಧಿಗೆ ಪ್ರತೀ ವರ್ಷ ಶೇ.10ರ ಪರವಾನಿಗೆ ಶುಲ್ಕ ಮತ್ತು ಜಿಎಸ್‌ಟಿ ಹಾಗೂ ಇತರ ಶುಲ್ಕದ ಹೆಚ್ಚಳದೊಂದಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಿ, ಪರವಾನಿಗೆ ನೀಡಲು ವೈಯಕ್ತಿಕ ಸಂಧಾನಕ್ಕೆ ಕರೆಯಲಾಗಿದೆ, ಪರವಾನಿಗೆ ಅವಧಿ ಪೂರ್ಣಗೊಂಡ ನಂತರ ಪುನಃ ಹರಾಜು/ಟೆಂಡರ್ ಪ್ರಕಟಣೆ ಹೊರಡಿಸಲಾಗುವುದು.

ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017 ಮತ್ತು 794/2018 ರಂತೆ ವೈಯಕ್ತಿಕ ಸಂಧಾನದ ವಿವರ :

| ಕ್ರ. ಸಂ | ಬಸ್ ನಿಲ್ದಾಣದ ಹೆಸರು | ಮಳಿಗೆಯ ವಿವರ | ವಿಸ್ತೀರ್ಣ (ಚ.ಅ) | ಪರವಾನಿಗೆ ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ(ಜಿಎಸ್‌ಟಿ ಹಾಗೂ ಇತರ ಶುಲ್ಕ ಒಳಗೊಂಡಿರುವುದಿಲ್ಲ (ರೂ.ಗಳಲ್ಲಿ) | ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಪಾವತಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) | ಖಾಲಿ ಅಗುವ ದಿನಾಂಕ |
|---|---|---|---|---|---|---|---|---|
| 1 | ಮಂಗಳೂರು | ಯಾತ್ರಿ ನಿವಾಸ(ಕಛೇರಿ ಸ್ಥಳ ಬಳಕೆ/ವಾಣಿಜ್ಯ ಬಳಕೆ/ಇತರೆ ಮಳಿಗೆ)ಸಂಖ್ಯೆ:15 | 2520.00 | 10ವರ್ಷ | 1,43,000/- | 4,29,000/- | 1687/- | ಖಾಲಿ ಇದೆ |

### : ಸೂಚನೆ ಮತ್ತು ನಿಯಮಗಳು :

1) ವೈಯಕ್ತಿಕ ಸಂಧಾನ ಅರ್ಜಿ ಫಾರಂ, ಷರತ್ತು ಹಾಗೂ ನಿಬಂಧನೆಗಳನ್ನು ಪಡೆಯಲು ಮಳಿಗೆಗೆ ನಿಗದಿಪಡಿಸಿದ ನಿಗದಿತ ಅರ್ಜಿ ಶುಲ್ಕ ಮತ್ತು ಜಿಎಸ್‌ಟಿ ಮೊತ್ತಕ್ಕೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗರವರ ಪದನಾಮಕ್ಕೆ ಡಿ.ಡಿ ಪಡೆದು **ದಿ:19.02.2020 ರಿಂದ ದಿ:17.03.2020 ರಂದು 15.00ಗಂಟೆಯವರೆಗೆ** ಕಛೇರಿ ವೇಳೆಯಲ್ಲಿ ಸಲ್ಲಿಸಿ ಅರ್ಜಿ ಮತ್ತು ಷರತ್ತು ನಿಬಂಧನೆಗಳನ್ನು ಪಡೆಯಬಹುದಾಗಿದೆ.
2) ವೈಯಕ್ತಿಕ ಸಂಧಾನದಲ್ಲಿ ಭಾಗವಹಿಸುವಾಗ ಷರತ್ತು ನಿಬಂಧನೆಗಳನ್ನು ಒಪ್ಪಿಕೊಂಡು. ಇ.ಎಂ.ಡಿ ಹಣ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗ, ಮಂಗಳೂರು (Divisional Controller, KSRTC, Mangaluru Division, Mangaluru) ರವರ ಪದನಾಮಕ್ಕೆ ಪಡೆದ ಡಿ.ಡಿಯ ಮೂಲ ಪ್ರತಿ ಹಾಗೂ ಷರತ್ತು ನಿಬಂಧನೆಗಳಲ್ಲಿ ಸೂಚಿಸಿರುವ ಅಗತ್ಯ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಭರ್ತಿ ಮಾಡಿದ ಅರ್ಜಿ ಫಾರಂ ಹಾಗೂ ದಾಖಲಾತಿಗಳ ಅಡಕದೊಂದಿಗೆ ದಿ:19.03.2020ರಂದು ಸಮಯ 11:30ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು ಮತ್ತು ಟೆಂಡರ್ ಸಮಿತಿಯ ಸಮ್ಮುಖದಲ್ಲಿ ನಡೆಸಲಾಗುವ ವೈಯಕ್ತಿಕ ಸಂಧಾನದಲ್ಲಿ ಭಾಗವಹಿಸುವುದು.
3) ಸಂಧಾನದಲ್ಲಿ ಭಾಗವಹಿಸಿ ನಿಗದಿಪಡಿಸಿದ ನಿಗದಿತ ಶುಲ್ಕ ಅಥವಾ ಹೆಚ್ಚಿಗೆ ಸೂಚಿಸಿ ಆಯ್ಕೆಗೊಂಡ ಸಂಧಾನಕಾರರು ತಾವು ಸೂಚಿಸಿರುವ ಪರವಾನಿಗೆ ಶುಲ್ಕದ 10ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಆಯ್ಕೆ ಪತ್ರ ತಲುಪಿದ ಏಳುದಿನದೊಳಗೆ ಪಾವತಿಸಿ ಕರಾರು ಒಪ್ಪಂದ ಮಾಡಿಕೊಳ್ಳುವುದು.
4) ವಾಣಿಜ್ಯ ಮಳಿಗೆಯನ್ನು ಯಾವ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗಿದ್ದು (As is where is basis) ಅದರಂತೆ ವ್ಯವಹಾರ ಸಲುವಾಗಿ ಅಗತ್ಯವಿರುವ ವ್ಯವಸ್ಥೆಗಳನ್ನು ಎರಡನೇ ಪಾರ್ಟಿಯವರು ಮಾಡಿಕೊಳ್ಳುವುದು ಹಾಗೂ ಈ ಬಗ್ಗೆ ಪೂರ್ವಾನುಮತಿಯನ್ನು ನಿಗಮದಿಂದ ಪಡೆದುಕೊಳ್ಳುವುದು. ಆದರೆ ಮಳಿಗೆ/ತೆರೆದ ಸ್ಥಳದ ಮೂಲ ಸ್ವರೂಪಕ್ಕೆ ಯಾವುದೇ ರೀತಿಯ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

5) ಆಯ್ಕೆಗೊಂಡ ಬಿಡ್‌ದಾರರು, ಕರಾರು ಒಪ್ಪಂದ ಮಾಡಿಕೊಂಡ ಬಳಿಕವೇ ಎರಡನೇ ಬಿಡ್ಡುದಾರರ ಇ.ಎಂ.ಡಿ ಮೊತ್ತವನ್ನು ಹಿಂದಿರುಗಿಸಲಾಗುವುದು.

6) ಸದರಿ ವ್ಯವಹಾರವನ್ನು ನಡೆಸಲು ಕೇಂದ್ರ/ರಾಜ್ಯ ಸರಕಾರ, ಸ್ಥಳೀಯ ಸಂಸ್ಥೆ/ಇಲಾಖೆಗಳಿಂದ ಕಾನೂನು ರೀತ್ಯ ಎಲ್ಲಾ ಅನುಮತಿ / ಕ್ರಮಗಳನ್ನು ಕಡ್ಡಾಯವಾಗಿ ಎರಡನೇ ಪಾರ್ಟಿಯವರು ಪಡೆದುಕೊಳ್ಳುವುದು ಹಾಗೂ ಆ ಸಂಬಂಧ ಎಲ್ಲಾ ಕಾನೂನು ರೀತ್ಯ ಶುಲ್ಕಗಳನ್ನು ಸಕಾಲದಲ್ಲಿ ಪಾವತಿಸುವುದು. ಇದರಿಂದ ಉದ್ಭವಿಸುವ ಎಲ್ಲಾ ಕಾನೂನು ತೊಡಕುಗಳಿಗೆ ಎರಡನೇ ಪಾರ್ಟಿಯವರು ಜವಾಬ್ದಾರಾಗಿರುತ್ತಾರೆ.

7) ಸಂಧಾನದಲ್ಲಿ ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 07 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ಸ್ಟ್ಯಾಂಪ್ ಕಾಯಿದೆ ಪ್ರಕಾರ ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

8) ಬಿಡ್‌ದಾರರು ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಸಂಧಾನ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ವ್ಯವಹಾರ ಸ್ಥಳದ ಬದಲಾವಣೆಗೆ ಅವಕಾಶವಿರುವುದಿಲ್ಲ.

9) ಓರ್ವ ಬಿಡ್‌ದಾರರು ಸದರಿ ಮಳಿಗೆಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

10) ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 07 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಸದರಿ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಆದ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

11) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾನಿಗಮವು ಆಗಿಂದಾಗ್ಗೆ ವಿಧಿಸುವ/ಕಾಲ ಕಾಲಕ್ಕೆ ಬದಲಾಗುವ ಷರತ್ತು/ನಿಬಂಧನೆಗಳಿಗೆ ಇದಕ್ಕೆ ಸಂಬಂಧಿಸಿದಂತೆ ಹೊಸದಾಗಿ ಸೇರ್ಪಡೆಯಾಗುವ ಯಾವುದೇ ಕಾನೂನುಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.

12) ಸಂಧಾನ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಪುರಸ್ಕರಿಸಿ/ತಿರಸ್ಕರಿಸುವ/ಮಾರ್ಪಾಡು ಹಾಗೂ ರದ್ದುಪಡಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಹೆಚ್ಚಿನ ವಿವರಗಳಿಗಾಗಿ ವಿಭಾಗ ಕಛೇರಿ ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗ, ಬಿಜೈ, ಮಂಗಳೂರು-575004 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ:ವಿಭಾಗೀಯ ಸಂಚಾರ ಅಧಿಕಾರಿ-7760990702 & ಸಹಾಯಕ ಸಂಚಾರ ವ್ಯವಸ್ಥಾಪಕರು:7760990711 ಸಂಪರ್ಕಿಸುವುದು

ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾ.ನಿಗಮ:ಮಂಗಳೂರು